(ಸಾಕ್ಷಿಯನ್ನು ಈ ದಿನ ತಾ 20/09/2019 ರಂದು ಕರೆಯಿಸಿ ಪ್ರಮಾಣವಚನ ಭೋಧಿಸಲಾಯಿತು)

ಮುಖ್ಯ ವಿಚಾರಣೆ ಅರ್ಜಿದಾರರನ ಪರ ಶ್ರೀ ಜಿ.ಎನ್.ಬಿ. ವಕೀಲರಿಂದ

ನನ್ನ ಮುಖ್ಯ ವಿಚಾರಣೆಯಂದು ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ.

ನನ್ನ ಪರವಾಗಿ ಈ ಪ್ರಕರಣದಲ್ಲಿ ಕೆಲವೊಂದು ದಾಖಲೆಗಳನ್ನು ಹಾಜರು ಮಾಡಿದ್ದು, ಗೆಜೆಟ್ ಪ್ರಕಟಣೆ ನಿಪಿ-1 ರಲ್ಲಿದೆ. ನೋಟೀಸು ನಿಪಿ-2 ರಲ್ಲಿದೆ. ಪಹಣಿ ಪತ್ರಿಕೆಗಳು ನಿಪಿ-3 ಮತ್ತು ನಿಪಿ-4 ರಲ್ಲಿವೆ. ಪೋಟೋಗಳು ನಿಪಿ-5 ಮತ್ತು ನಿಪಿ-6 ರಲ್ಲಿವೆ. ಅದರ ಸಿ.ಡಿ. ನಿಪಿ-7 ರಲ್ಲಿದೆ. ಬೆಳೆ ದೃಢೀಕರಣ ಪತ್ರ ನಿಪಿ8 ರಲ್ಲಿದೆ. ಬೋರ್ ವೆಲ್ ಬಗ್ಗೆ ಬಿಲ್ಲು ನಿಪಿ-9 ರಲ್ಲಿದೆ.

ಅರ್ಜಿಯನ್ನು ಪುರಸ್ಕರಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ನಾನು ಕೇಳಿರುವಂತೆ ಪರಿಹಾರವನ್ನು ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಎದುರುದಾರರು ಮತ್ತು ಅವರ ವಕೀಲರು ಗೈರು ಹಾಜರು ಆಗಿದ್ದುದರಿಂದ ಸಾಕ್ಷಿಯ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.)

( ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು.)

(ಓದಿ ಹೇಳಿ ಕೇಳಲಾಗಿದೆ ಸರಿ ಇದೆ ಎಂದು ಒಪ್ಪಿರುತ್ತಾರೆ)

1ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.